

ಕೆಲಸಕ್ಕೆ ರಾಜೀನಾಮೆ ನೀಡಿ ಉಸ್ತಾದ್ ಅಲಿ ಅಕ್ಬರ್ ಖಾನ್ ಎನ್ನುವ ಕಿಂದರಜೋಗಿಯ ಹಿಂದೆ ಮೋಡಿಗೊಳಗಾದವರಂತೆ ಬಾಂಬೆಗೆ ನಡೆದುಬಿಟ್ಟರು. ಅವರಾದರೂ ಎಂತಹ ಗುರು! 'ಅರೇ ಆಗಯಾ? ಪಾಗಲ್ ಆದ್ಮಿ ಹೋ' ಎನ್ನುತ್ತಾ ಇಪ್ಪತ್ತೆರಡು ವರ್ಷದ ಯುವಕನಿಗೆ ಬೆರಳು ಮಡಿಸುವುದರಿಂದ ಸರೋದ್ ಪಾಠವನ್ನು ಪ್ರಾರಂಭಿಸಿದರು. ಕಲ್ಕತ್ತೆಗೆ ಹೋದ ಗುರುವನ್ನು ಬಾಲದಂತೆ ಇವರೂ ಹಿಂಬಾಲಿಸಿದರು. ಲೋಕದ ಪರಿವೆಯೇ ಇಲ್ಲದೆ ಹತ್ತು ಹನ್ನೆರಡು ಗಂಟೆಗಳ ಕಾಲ ಅಭ್ಯಾಸ ಮಾಡುತ್ತಿದ್ದರು. ಸರೋದ್ ಅವರ ಕೈಗಳ ಮುಂದುವರಿದ ಭಾಗವೇನೋ ಎನ್ನುವಂತಾಗಿತ್ತು. ಅಲ್ಲೇ 'ಅಲಿ ಅಕ್ಬರ್ ಕಾಲೇಜ್ ಆಫ್ ಮ್ಯೂಸಿಕ್'ನಲ್ಲಿ ಅನ್ನಪೂರ್ಣಾದೇವಿಯ ಪಾಠಕ್ಕೆ ತೆರೆದುಕೊಳ್ಳುವ ಅವಕಾಶ ದೊರಕಿತು. ಖಾನ್ ಸಾಹೇಬರು ಆರು ವರ್ಷಗಳ ಕಾಲ ಯಾವ ಶುಲ್ಕವನ್ನೂ ಪಡೆಯದೆ ಇವರೊಳಗೆ ಹರಿಸಿದ ನಾದಸುಧೆ ಇವರ ಜೀವನದುದ್ದಕ್ಕೂ ಇವರ ಮೌಲ್ಯಗಳನ್ನು ರೂಪಿಸಿತ್ತು. ಗುರು, ಭಕ್ತಿ ಮತ್ತು ಶರಣಾಗತಿಯ ಆಧ್ಯಾತ್ಮಿಕ ಅರ್ಥವನ್ನು ಇವರಿಗೆ ಮನದಟ್ಟು ಮಾಡಿತ್ತು. ಗುರುಋಣ ಎನ್ನುವುದು ಅದೆಷ್ಟು ಅಗಾಧ ಎಂದು ಅರಿವಾಗಿತ್ತು. ಇಂಗ್ಲಿಷ್ ಮುಂತಾದ ಹಲವು ಕಲಿಕೆಗಳು ಅವರ ಬದುಕಿನಲ್ಲಿ ನಡೆದಿದ್ದವು. ಆದರೆ ಆ ಯಾವ ಗುರುಗಳ ಅಧ್ಯಾಪನವೂ ಅವರಿಗೆ ತೀರಿಸಬೇಕಾದ ಋಣ ಎಂದು ಅನ್ನಿಸಿರಲಿಲ್ಲ. ಆದರೆ ಸಂಗೀತ ಕಲಿಕೆ ಉಳಿದೆಲ್ಲಾ ಕಲಿಕೆಗಳಿಗಿಂತ ಭಿನ್ನ ಮತ್ತು ಅಲ್ಲಿ ಗುರು-ಶಿಷ್ಯರ ಸಂಬಂಧ ಸಂಪೂರ್ಣವಾಗಿ ಅನನ್ಯವಾದುದು